# KANNADA

## PAPER—II

## ( LITERATURE )

| Time Allowed : Three Hours | Maximum Marks : 250 |
|---|---|

### QUESTION PAPER SPECIFIC INSTRUCTIONS

**Please read each of the following instructions carefully before attempting questions**

There are EIGHT questions divided in two Sections.

Candidate has to attempt FIVE questions in all.

Question Nos. **1** and **5** are compulsory and out of the remaining, THREE are to be attempted choosing at least ONE question from each Sections.

The number of marks carried by a question/part is indicated against it.

Answers must be written in KANNADA.

Word limit in questions, wherever specified, should be adhered to.

Attempts of questions shall be counted in chronological order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

## SECTION—A

1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ: (ಪ್ರತಿಯೊಂದೂ 125 ಪದಗಳ ಮಿತಿಯಲ್ಲಿ ಇರಲಿ) 10×5=50

(a) ನುಡಿದುದನೆಯ್ದೆ ತುತ್ತ ತುದಿಯೆಯ್ದುವಿನಂ ನುಡಿದಂ ವಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದ ಪೂಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆವನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನ ಮಣ್ಣುಗುಂದಲೇನಭಿಮಾನ ಧನಂ ಸುಯೋಧನಂ

(b) ನಾನು ನಿಮ್ಮವಳಲ್ಲವಯ್ಯಾ, ನಾನು ಅನಿಮಿಷನವರವಳು.
ನಾನು ನಿಮ್ಮವಳಲ್ಲವಯ್ಯಾ, ನಾನು ಅಜಗಣ್ಣನವರವಳು.
ನಾನು ನಿಮ್ಮವಳಲ್ಲವಯ್ಯಾ, ನಾನು ಪ್ರಭುವಿನ ಸಂತತಿಯವಳು.
ನಾನು ನಿಮ್ಮವಳಲ್ಲವಯ್ಯಾ, ನಾನು ಮಾದಾರ ಚೆನ್ನಯ್ಯನ ಮೊಮ್ಮಗಳು.
ನಾನು ನಿಮ್ಮವಳಲ್ಲವಯ್ಯಾ, ನಾನು ಪ್ರಸಾದಿಗಳ ಮನೆಯ ಕೀಳುದೊತ್ತು
ನಾನು ನಿಮ್ಮವಳಲ್ಲವಯ್ಯಾ, ಸಂಗಯ್ಯ
ನಾನು ಬಸವಯ್ಯನ ಮನೆಯ ತೊತ್ತಿನ ಮಗಳು.

(c) ಬಿಸುಟು ಹೋದನು ರಥವ ಸಾರಥಿ
ವಸುಧೆಯಲಿ ರಥವದ್ದು ಕೆಡೆದುದು
ನಿಶಿತ ಮಾರ್ಗಣವಿಲ್ಲ ಕೈಯ್ಯಲ್ಲಿ ದಿವ್ಯ ಧನುವಿಲ್ಲ
ಎಸುವಡೆಂತೇಳುವುವು ಕಯ್ ನೀ
ಬೆಸಸುವೊಡೆ ಮನವೆಂತು ಬಂದುದು
ಬಸುರ ಶಿಬಿ ಬಲುಹಾಯ್ತು ಕರ್ಣನ ಕೊಲುವವನಲ್ಲೆಂದ.

(d) ಲೋಕವೆಲ್ಲೆನ್ನ ನೋಲೈಸುತಿರ್ದರು ನಾನು
ಲೋಕವ ಬೆರಸೆನೆಂಬುದನು
ಲೋಕಕರಿಕೆ ಮಾಡಲೆಂದು ನಿಂದಂತೆ ನಾ
ನೇಕಾಕಿಯಾಗಿರ್ದನಾಗ

(e) ರೇಖೆ ರೇಖೆ ಕೂಡಿದಲ್ಲಿ ಅಕ್ಷರವಾದವು
ಅಕ್ಷರಾಕ್ಷರ ಕೂಡಿದಲ್ಲಿ ಶಬ್ದವಾಯಿತ್ತು
ಶಬ್ದ ಶಬ್ದ ಕೂಡಿದಲ್ಲಿ ಗ್ರಂಥಾನ್ವಯವಾಯಿತ್ತು
ಅಕ್ಷರದಲ್ಲಿಲ್ಲ; ಶಬ್ದದಲ್ಲಿಲ್ಲ; ಗ್ರಂಥಾನ್ವಯದಲ್ಲಿಲ್ಲ
ಏನೆಂಬುದಿಲ್ಲ, ಮೊದಲೆ ಇಲ್ಲ.
ಇಲ್ಲೆಂಬುವ ಅಹುದೆಂಬುವ ಉಭಯಶಬ್ದಕ್ಕೆ ಲೋಪವಿಲ್ಲನೋಡಾ.
ಕಪಿಲಸಿದ್ಧ ಮಲ್ಲಿಕಾರ್ಜುನ ಮಹಿಮನು.

2. *(a)* ಸುಕುಮಾರಸ್ವಾಮಿ ಕಥೆಯಲ್ಲಿ ಭವಾವಳಿಗಳು ರೂಪಿಸುವ ಭೋಗ ಮತ್ತು ವೈರಾಗ್ಯದ ತೀವ್ರತೆಯ ಆಶಯಗಳನ್ನು ಚರ್ಚಿಸಿ. (250 ಪದಗಳು) 20

*(b)* ಕರ್ಣನ ಸಾವಿನ ಸಂದರ್ಭದಲ್ಲಿ ದುರ್ಯೋಧನನ ಪ್ರಲಾಪವನ್ನು ಕುಮಾರವ್ಯಾಸ ಚಿತ್ರಿಸಿರುವ ಬಗೆಯನ್ನು ವಿವರಿಸಿ. (250 ಪದಗಳು) 20

*(c)* ಭರತೇಶವೈಭವದ ನವರಾತ್ರಿ ಸಂಧಿಯ ವೈಶಿಷ್ಟ್ಯವನ್ನು ವಿವರಿಸಿ. (125 ಪದಗಳು) 10

3. *(a)* ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುವ ಭಕ್ತಿಯ ಸ್ವರೂಪವನ್ನು ಸೋದಾಹರಣವಾಗಿ ವಿಶ್ಲೇಷಿಸಿ. (250 ಪದಗಳು) 20

*(b)* 'ದುಶ್ಶಾಸನ ವಧಾ ಪ್ರಸಂಗ'ವು ಪಂಪಭಾರತದಲ್ಲಿ ಅಭಿವ್ಯಕ್ತಿಗೊಂಡ ಬಗೆಯನ್ನು ಕುಮಾರವ್ಯಾಸನ ಈ ಪ್ರಸಂಗದೊಡನೆ ಹೋಲಿಸಿ - ವಿಶ್ಲೇಷಿಸಿ. (250 ಪದಗಳು) 20

*(c)* ದೇವರ ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ವ್ಯಕ್ತಿತ್ವದ ಆಧ್ಯಾತ್ಮಿಕ ಸ್ವರೂಪವನ್ನು ವಿವರಿಸಿ. (125 ಪದಗಳು) 10

4. *(a)* ಹರಿಹರನ ಕಥನ ತಂತ್ರದ ವೈಶಿಷ್ಟ್ಯವನ್ನು 'ನಂಬಿಯಣ್ಣನ ರಗಳೆ'ಯ ಹಿನ್ನೆಲೆಯಲ್ಲಿ ಚರ್ಚಿಸಿ. (250 ಪದಗಳು) 20

*(b)* ಅಕ್ಕಮಹಾದೇವಿಯ ವಚನಗಳಲ್ಲಿ ಕಾಣುವ ರೂಪಕಗಳ ವೈಶಿಷ್ಟ್ಯವನ್ನು ಸೋದಾಹರಣವಾಗಿ ವಿವರಿಸಿ. (250 ಪದಗಳು) 20

*(c)* 'ವಿಕ್ರಮಾರ್ಜುನ ವಿಜಯ'ದಲ್ಲಿ ಕರ್ಣನ 'ಭೀಷ್ಮ ದರ್ಶನ'ದ ಪ್ರಸಂಗದ ವೈಶಿಷ್ಟ್ಯತೆಯನ್ನು ವಿವರಿಸಿ. (125 ಪದಗಳು) 10

## SECTION—B

5. ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ: (ಪ್ರತಿ ವಿಷಯಕ್ಕೆ ಸುಮಾರು 125 ಪದಗಳು) 10×5=50

*(a)* ನಿರಂಜನರ 'ಕೊನೆಯ ಗಿರಾಕಿ'

*(b)* ರಾಜರತ್ನಂ ಅವರ 'ರತ್ನನ್ ಪರಪಂಚ' ಕವನ

*(c)* ಜನಪದ ಕಥೆಗಳಲ್ಲಿ ಅತಿಮಾನುಷ ಪ್ರಪಂಚ

*(d)* ಬೇಂದ್ರೆಯವರ 'ಹುಬ್ಬಳ್ಳಿಯಾಂವಾ' ಕವನ

*(e)* 'ಬುದ್ಧಿವಂತಿಕೆ'ಯ ಒಗಟುಗಳು

6. *(a)* 'ಕ್ಲಿಪ್ ಜಾಯಿಂಟ್' ಕಥೆಯಲ್ಲಿ ಕಂಡುಬರುವ ನವ್ಯತೆಯ ಅಂಶಗಳನ್ನು ವಿವರಿಸಿ. (250 ಪದಗಳು) 20

*(b)* 'ಕ್ಷಿತಿಜ' ಕಥೆಯಲ್ಲಿ ಶಾಂತಿನಾಥ ದೇಸಾಯಿಯವರು ಹೆಣ್ಣಿನ ವ್ಯಕ್ತಿತ್ವದ ವಿವಿಧ ಮುಖಗಳನ್ನು ಚಿತ್ರಿಸುವ ರೀತಿಯನ್ನು ವಿಶ್ಲೇಷಿಸಿ. (250 ಪದಗಳು) 20

*(c)* 'ನಾಲ್ಕು ಮೊಳ ಭೂಮಿ' ಕಥೆಯಲ್ಲಿ ಕಂಡುಬರುವ ಸಮಸ್ಯೆಯ ಸ್ವರೂಪವನ್ನು ವಿಶ್ಲೇಷಿಸಿ. (125 ಪದಗಳು) 10

7. *(a)* ಕನ್ನಡ ಕಾವ್ಯದ ಆಧುನಿಕತೆಯ ಲಕ್ಷಣಗಳು ಗೋವಿಂದ ಪೈ ಹಾಗೂ ಬಿ.ಎಂ.ಶ್ರೀಯವರ ಕವನಗಳಲ್ಲಿ ಕಾಣುವ ಬಗೆಯನ್ನು ಚರ್ಚಿಸಿ. (250 ಪದಗಳು) 20

*(b)* 'ಶೂದ್ರ ತಪಸ್ವಿ' ನಾಟಕದಲ್ಲಿ ಕಂಡುಬರುವ ಸಾಮಾಜಿಕ, ಧಾರ್ಮಿಕ ಅಂಶಗಳ ವಿಮರ್ಶಾತ್ಮಕ ಸ್ವರೂಪವನ್ನು ನಿರೂಪಿಸಿ. (250 ಪದಗಳು) 20

*(c)* 'ಅತಿಮಾನುಷ ಪತ್ನಿ'ಯರನ್ನು ಕುರಿತು ಕಲ್ಪನೆ ಜನಪದ ಕಥೆಗಳಲ್ಲಿ ಕಾಣುವ ಬಗೆಯನ್ನು ವಿಶ್ಲೇಷಿಸಿ. (125 ಪದಗಳು) 10

8. *(a)* ಉತ್ತರ ಕರ್ನಾಟಕದ ಒಗಟುಗಳ ಪ್ರಾದೇಶಿಕ ಸ್ವರೂಪವನ್ನು ಇಮ್ರಾಪುರ ಅವರು ಸಂಪಾದಿಸಿದ ಕೃತಿಯ ಹಿನ್ನೆಲೆಯಲ್ಲಿ ಚಿತ್ರಿಸಿರಿ. (250 ಪದಗಳು) 20

*(b)* 'ಕನ್ನಡ ಜನಪದ ಕಥೆಗಳ'ಲ್ಲಿ ಸಂಪಾದಕರಾದ ಜೀ.ಶಂ. ಪರಮಶಿವಯ್ಯ ಅವರು ಮಾಡಿಕೊಂಡಿರುವ ವಿಭಾಗೀಕರಣದ ಔಚಿತ್ಯತೆಯನ್ನು ಚರ್ಚಿಸಿ. (250 ಪದಗಳು) 20

*(c)* ತುಘಲಕನ ಪಾತ್ರ ಚಿತ್ರಣದ ಹಿನ್ನೆಲೆಯಲ್ಲಿ ಒಟ್ಟಾರೆ ಮನುಷ್ಯನ ಏಕಾಂಗಿತನವನ್ನು ನಾಟಕಕಾರರು ಚಿತ್ರಿಸಲು ಪ್ರಯತ್ನಿಸಿದ್ದಾರೆಯೇ? ಚರ್ಚಿಸಿ. (125 ಪದಗಳು) 10

★★★